**OS: 44/2023**
**P.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕೂಡ್ಲಿಗಿ</u>**

ದಿನಾಂಕಃ 05.02.2026 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ</u>**

ನಮ್ಮ ಬ್ಯಾಂಕ್ ನಿಂದ ಪ್ರತಿವಾದಿ ವಾಹನ ಖರೀದಿಗಾಗಿ ಪಡೆದ ಸಾಲದ ವಸೂಲಾತಿಗಾಗಿ ಈ ದಾವೆ ಸಲ್ಲಿಸಿರುತ್ತೇವೆ. ರೂ. 6 ಲಕ್ಷಗಳನ್ನು ಪ್ರತಿವಾದಿ ನಮ್ಮ ಬ್ಯಾಂಕ್ ನಿಂದ ಸಾಲವಾಗಿ ಪಡೆದಿರುತ್ತಾರೆ. ಪ್ರತಿವಾದಿ ನಮ್ಮ ಬ್ಯಾಂಕ್ ನಿಂದ ಸಾಲ ಪಡೆಯುವಾಗ ನಾನು ಮ್ಯಾನೇಜರ್ ಆಗಿ ಇರಲಿಲ್ಲ. ಸಾಲ ಮಂಜೂರಾತಿ ಮಾಡುವ ಕಾಲಕ್ಕೆ ಪ್ರತಿವಾದಿ ಮತ್ತು ನಮ್ಮ ಬ್ಯಾಂಕಿನ ಮ್ಯಾನೇಜರ್ ನಡುವೆ ಏನು ಮಾತುಕತೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ಇಂಗ್ಲೀಷ್ ನಲ್ಲಿ ಸಹಿ ಮಾಡಿರುವುದರಿಂದ ಅವರು ಅನಕ್ಷರಸ್ಥರು ಎಂದು ಹೇಳಲಾಗುವುದಿಲ್ಲ. ಸಾಲದ ಅರ್ಜಿ ದಾಖಲಾತಿಗಳಲ್ಲಿ ಪ್ರತಿವಾದಿ ಇಂಗ್ಲೀಷ್ ನಲ್ಲಿ ಸಹಿ ಮಾಡಿರುತ್ತಾರೆ. ಪ್ರತಿವಾದಿ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿರಲಿಲ್ಲ ಕನ್ನಡದಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಾಲ ನೀಡುವ ಸಮಯದಲ್ಲಿ ಇಂಗ್ಲೀಷ್ ನಲ್ಲಿರುವ ಫಾರಂ ಗಳಿಗೆ ಸಹಿ ಪಡೆದಿರುತ್ತೇವೆ ಎಂದರೆ ಸರಿ. ಆದರೆ ವ್ಯವಹಾರದ ಬಗ್ಗೆ ಕನ್ನಡದಲ್ಲಿ ಹೇಳಿರುತ್ತೇವೆ.

ಪ್ರತಿವಾದಿ ಲೋನ್ ಪಡೆದ ನಂತರ ಮೊದಲಿಗೆ ಪ್ರತೀ ಕಂತನ್ನು ಸರಿಯಾಗಿ ಪ್ರತಿವಾದಿ ನಮ್ಮ ಬ್ಯಾಂಕಿಗೆ ಕಟ್ಟಿಕೊಂಡು ಬಂದಿದ್ದಾರೆ ಎಂದರೆ ಸರಿ. ಆ ನಂತರ ಅವರು ಕಂತುಗಳನ್ನು ಕಟ್ಟದೆ ಇರುವುದರಿಂದ ಸಾಲವು ಸುಸ್ತಿಯಾಗಿರುತ್ತದೆ. ಪ್ರತಿವಾದಿ ನಮ್ಮ ಬ್ಯಾಂಕಿಗೆ ಎಷ್ಟು ಸಾಲದ ಕಂತನ್ನು ಕಟ್ಟಿದ್ದಾರೆ ಎಂಬುದಕ್ಕೆ ಸಂಬಂಧಿಸಿದಂತೆ ಅಕೌಂಟ್ ಸ್ಟೇಟ್ಮೆಂಟ್ ನ್ನು ಹಾಜರುಪಡಿಸಿರುತ್ತೇನೆ. ನಮ್ಮ ಬ್ಯಾಂಕ್ ದಾಖಲಾತಿಗಳನ್ನು ನೋಡಿ ಎಷ್ಟು ಪಾವತಿ ಮಾಡಿದ್ದಾರೆಂದು ನಾನು ಹೇಳಬಲ್ಲೆ. ದಿಃ 13.06.2019 ರಿಂದ 15.02.2021 ರವರೆಗೆ ರೂ. 2,60,000/- ಗಳನ್ನು ಪ್ರತಿವಾದಿ ಮರು ಪಾವತಿ ಮಾಡಿದ್ದಾರೆ ಎಂದರೆ ಅದರ ಒಳಗಿನ ಮೊತ್ತವನ್ನು ಮರುಪಾವತಿ ಮಾಡಿದ್ದಾರೆ.

ಪ್ರತಿವಾದಿಯು ವಾಹವನ್ನು ಬಾಡಿಗೆ ಪಡೆಯುವ ಸಲುವಾಗಿ ಸದರಿ ಸಾಲವನ್ನು ಪಡೆದಿರುತ್ತಾರೆ ಎಂದರೆ ಸರಿ. ಪ್ರತಿವಾದಿಗೆ ಬಾಡಿಗೆ ಆದಾಯ ಹೊರತುಪಡಿಸಿ ಬೇರೆ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಾವು ಸಾಲ ನೀಡುವ ಸ್ಕೀಮ್ ನಲ್ಲಿ ವಾಹನದ ಮೇಲೆ ಸಾಲ ನೀಡುವುದನ್ನು ಹೊರತುಪಡಿಸಿ ಬೇರೆ ಯಾವುದರ ಮೇಲೆ ಸಾಲ ನೀಡಲು ಬರುವುದಿಲ್ಲ. ಸದರಿ ವಾಹನದ ಮೇಲೆ ನಾವು ಹೈಪೋಥಿಕೇಷನ್ ಡೀಡ್ ಮಾಡಿಕೊಂಡು ಸಾಲ ನೀಡಿರುತ್ತೇವೆ. 2019-

20 ರ ಸಾಲಿನಲ್ಲಿ ಕೋವಿಡ್ ಲಾಕ್ ಡೌನ್ ಇತ್ತು ಎಂದರೆ ಸರಿ. ಕೋವಿಡ್ ಲಾಕ್ಡೌನ್ ಮುಗಿದ ನಂತರ ಆತನು ಸಾಲವನ್ನು ಮರುಪಾವತಿಸಲಾಗದೆ ಸುಸ್ತಿಯಾಗಿದೆ ಎಂದರೆ ಸರಿ.

ಸೆಪ್ಟೆಂಬರ್-2021 ರಲ್ಲಿ ವಾಹವನ್ನು ಜಪ್ತುಪಡಿಸಲಾಗಿರುತ್ತದೆ. ನಾವು ಸದರಿ ವಾಹನ ಜಪ್ತುಪಡಿಸುವ ಪೂರ್ವದಲ್ಲಿ ಸಾಲದ ಬಾಕಿಯನ್ನು ಮರುಪಾವತಿಸುವಂತೆ ಪ್ರತಿವಾದಿಗೆ ನೋಟೀಸ್ ನೀಡಿರುತ್ತೇವೆ ಮತ್ತು ಪತ್ರಿಕೆಯಲ್ಲಿ ಸಹ ಜಪ್ತುಪಡಿಸಿಕೊಂಡ ಸದರಿ ವಾಹನದ ಮಾರಾಟದ ಬಗ್ಗೆ ಪತ್ರಿಕಾ ಪ್ರಕಟಣೆ ಮಾಡಿಸಿರುತ್ತೇವೆ. ಆ ಪತ್ರಿಕಾ ಪ್ರಕಟಣೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ವಾಹನ ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ನೋಟೀಸ್ ನೀಡಿದ್ದು ಅದನ್ನು ಯಾವಾಗ ನೀಡಿರುತ್ತೇವೆಂದು ದಾಖಲೆ ನೋಡಿ ಹೇಳಬಲ್ಲೆ. ಪ್ರತಿವಾದಿಗೆ ಸಾಕಷ್ಟು ಸಮಯ ನೀಡಿ ವಾಹನವನ್ನು ಹರಾಜಿಗೆ ಇಡಲಾಗಿರುತ್ತದೆ. ಪ್ರತಿವಾದಿಯ ವಾಹನ ಎಲ್ಲಿ, ಯಾವಾಗ ಸೀಜ್ ಮಾಡಲಾಗಿದೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ವಾಹನವನ್ನು ಜಪ್ತುಪಡಿಸಿಕೊಂಡ ಬಗ್ಗೆ ವಾದ ಪತ್ರದಲ್ಲಾಗಲಿ, ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲಿ ಹೇಳಿಲ್ಲ ಎಂದರೆ ಸರಿ. ವಾಹನವನ್ನು ಜಪ್ತುಪಡಿಸಿಕೊಳ್ಳಬೇಕಾಗದರೆ ಜಪ್ತು ಪಂಚನಾಮೆ ಜರುಗಿಸಬೇಕು ಎಂದರೆ ಸರಿ. ವಾಹನ ಜಪ್ತುಪಡಿಸಿಕೊಳ್ಳುವ ಕಾಲಕ್ಕೆ ಪ್ರತಿವಾದಿ ಇರಲಿಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ವಾಹನ ಜಪ್ತುಪಡಿಸಿಕೊಂಡ ನಂತರ ಮಾರಾಟ ಪ್ರಕ್ರಿಯೆಯನ್ನು ಯಾವ ಅವಧಿಯ ಒಳಗೆ ಮುಗಿಸಿರುತ್ತೇವೆ ಎಂದು ನನಗೆ ಈಗ ಹೇಳಲಾಗುವುದಿಲ್ಲ ದಾಖಲೆ ನೋಡಿ ಹೇಳಬಲ್ಲೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**